ಕೊಡಬೇಕಾಗುತ್ತದೆ. ಅಥವಾ ಆ ಗೇಟ್‌ನಲ್ಲಿ ಒಬ್ಬ ವಾಚ್‌ಮನ್‌ನನ್ನು ಅವರು ಹಾಕುವುದಾದರೆ ಅತನ ಖರ್ಚನ್ನು ನಾವು ನಮ್ಮ ಸರ್ಕಾರದ ವತಿಯಿಂದ ಭರಿಸಬೇಕಾಗುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ತಾವು ದೊಡ್ಡ ಮನಸ್ಸು ಮಾಡಿ ಇಲಾಖೆಯ ವತಿಯಿಂದಲೇ ಈ ಕೆಲಸವನ್ನು ತೆಗೆದುಕೊಳ್ಳಬೇಕು. ಇದಕ್ಕೆ ಸಂಬಂಧಪಟ್ಟ ರೈಲ್ವೆ ಅಧಿಕಾರಿಗಳ ಜೊತೆ ನಾನು ಈಗಾಗಲೇ ಮಾತನಾಡಿದ್ದೇನೆ. ಕೇಂದ್ರದ ರೈಲ್ವೆ ಮಂತ್ರಿಗಳಾದ ಮಾನ್ಯ ಜಾಫರ್ ಷರೀಫ್‌ರವರ ಗಮನಕ್ಕೆ ನಾವು ಇದನ್ನು ಪದೇ ಪದೇ ತೆಗೆದುಕೊಂಡು ಹೋದಾಗ ಅವರು ಒಂದೇ ಮಾತಿನಲ್ಲಿ ಏನು ಹೇಳಿದರೆಂದರೆ, ತಮ್ಮ ಸರ್ಕಾರದ ಪಿ.ಡಬ್ಲ್ಯು.ಡಿ.ನಿಂದ ಒಪ್ಪಿಕೊಳ್ಳುವುದಾದರೆ ನಾನು ಈ ಕೆಲಸವನ್ನು ಮಾಡಿಸಿಕೊಡುತ್ತೇನೆಂದು ಹೇಳಿದರು. ಇದು ಕೆಂಗೇರಿಗೆ ಸೇರಿದಂಥ ಗೇಟಿನ ಬಗ್ಗೆ. ಇನ್ನೊಂದು ಚಿಕ್ಕ ಬಾಣಾವರಕ್ಕೆ ಸೇರಿದ ಗೇಟು. ಅಲ್ಲಿ ಸುತ್ತಮುತ್ತ ಯಾವ ಬ್ರಿಡ್ಜೂ ಕೂಡ ಇಲ್ಲ. ನಿಜವಾಗಿ ಹೇಳುವುದಾದರೆ ಸುಮಾರು ವಾಹನಗಳು ಆ ಲೆವಲ್ ಕ್ರಾಸಿಂಗ್‌ನಲ್ಲಿ ಆಕಸ್ಮಿಕಕ್ಕೆ ಒಳಗಾಗಿ ಅನೇಕ ಸಂಸಾರಗಳಿಗೆ ತೊಂದರೆಯಾಗುತ್ತಿದೆ. ಇದೇ ರೀತಿ ಅನೇಕ ಜಾನುವಾರಗಳಿಗೂ ತೊಂದರೆಯಾಗುತ್ತಿದೆ. ಅಲ್ಲಿ ಸುತ್ತಮುತ್ತ ರೈತರಿದ್ದು ಅವರು ಓಡಾಡುವುದಕ್ಕೆ ಜಾಗವಿಲ್ಲ. ಆದುದರಿಂದ ಈ ಚಿಕ್ಕ ಬಾಣಾವರದ ಗೇಟಿನ ಕೆಲಸವನ್ನು ತಾವು ಮಾಡಿಸುವುದಲ್ಲದೆ, ಕೆಂಗೇರಿ ಗೇಟಿನ ಬಗ್ಗೆ ಕೂಡ ದೊಡ್ಡ ಮನಸ್ಸು ಮಾಡಿ ಇಲಾಖೆಯ ವತಿಯಿಂದ ಹಣವನ್ನು ಏನಾದರೂ ಕೊಟ್ಟಿದ್ದೇ ಆದರೆ ಆ ಕೆಲಸವನ್ನು ಮಾಡಿಸಲು ರೈಲ್ವೆಯವರು ಮುಂದೆ ಬರುತ್ತಾರೆ.

ಶ್ರೀ ಕೆ. ಹೆಚ್. ರಂಗನಾಥ್:– ಇದು ಮನುಷ್ಯ ರಹಿತ ಗೇಟ್. ಅಲ್ಲಿ ಯಾರೂ ಇರಬೇಕಾಗಿಲ್ಲ ಎಂದು ಹಿಂದೆ ಯಾವುದೋ ಕಾಲದಲ್ಲಿ ಮಾಡಿದ್ದರು. ಆದರೂ ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಪ್ರಸ್ತಾಪ ಮಾಡಿ ನೋಡುತ್ತೇನೆ. ಈ ಖರ್ಚನ್ನು ಭರಿಸುವುದಕ್ಕೆ ಅವಕಾಶವಿದ್ದರೆ ಅದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಸ್. ರಮೇಶ್:– ಈಗಾಗಲೇ ಆ ಭಾಗದ ಜನರು ಇದರ ಬಗ್ಗೆ ಒಂದು ದೊಡ್ಡ ಹೋರಾಟವನ್ನು ಮಾಡಲು ದಿನಾಂಕವನ್ನು ನಿಗದಿ ಮಾಡಿದ್ದಾರೆ. ಅದಕ್ಕೆ ನಾವೂ, ನೀವೂ ಅವಕಾಶವನ್ನು ಕೊಡುವುದು ಬೇಡ. ಏಕೆಂದರೆ ಅಲ್ಲಿ ಸುತ್ತ ದೊಡ್ಡ ಲೇಔಟ್ ಇದೆ. ಅದರ ಮಧ್ಯದಲ್ಲಿ ರೈತರು ಇದ್ದಾರೆ. ಆ ರೈತರಿಗೆ ತೊಂದರೆ ಆಗುವುದಕ್ಕೆ ನಾವು ಅವಕಾಶ ಕೊಡುವುದು ಬೇಡ. ಅವರು ತಮ್ಮ ಎತ್ತಿನ ಗಾಡಿಗಳನ್ನು ರಸ್ತೆಗೆ ತಂದು ನಿಲ್ಲಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ನಾವು ಅವಕಾಶ ಕೊಡದೆ ತಾವು ಒಂದು ಅಧಿಕಾರಿಗಳ ತಂಡವನ್ನು ಕಳುಹಿಸಿದರೆ, ಇಲ್ಲಿ ಒಂದು ಸರ್ಕಾರ ಇದೆ, ಕ್ರಮ ತೆಗೆದುಕೊಳ್ಳುತ್ತಿದೆ ಎಂದು ಗೊತ್ತಾಗುತ್ತದೆ. ಅವರಿಗೂ ಒಂದು ಖಾತ್ರಿಯಾಗುತ್ತದೆ. ಸುಮಾರು 8-10 ವರ್ಷಗಳಿಂದ ಈ ಸಮಸ್ಯೆ ಹಾಗೆಯೇ ಇದೆ. ಈಗ ತಮ್ಮ ಕಾಲದಲ್ಲಾದರೂ ಇದು ಪರಿಹಾರವಾಗಲೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

## ಕೈಗಾರಿಕೆಗಳು ಹಾಗೂ ಬಳಕೆದಾರರಿಂದ ವಿದ್ಯುತ್ ಬಾಕಿ

**364 (1544):** ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಾ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಒಂದು ಲಕ್ಷ ರೂಪಾಯಿಗಳಿಗೂ ಮೀರಿ ವಿದ್ಯುತ್ ಬಾಕಿಯನ್ನು ಉಳಿಸಿಕೊಂಡಿರುವ ಕೈಗಾರಿಕೆಗಳು ಹಾಗೂ ಇತರೆ ಬಳಕೆದಾರರುಗಳ ವಿವರಗಳೇನು ?

ಆ) ವಿದ್ಯುತ್ ಬಾಕಿಯನ್ನು ವಸೂಲಿ ಮಾಡದಿರಲು ಕಾರಣವೇನು ?

೫) ಬಾಕಿ ವಸೂಲಿಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತೆಗೆದುಕೊಂಡಿರುವ ಕ್ರಮಗಳು ಯಾವುವು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):– ,

ಅ) ಸೆಪ್ಟೆಂಬರ್ 1992ರ ಅಂತ್ಯದಲ್ಲಿರುವಂತೆ ಒಂದು ಲಕ್ಷ ರೂ.ಗಳಿಗೂ ಮೀರಿ ವಿದ್ಯುತ್ ಬಾಕಿ ಉಳಿಸಿಕೊಂಡಿರುವ ಬಳಕೆದಾರರ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ನಗರ ಪಾಲಿಕೆ, ನಗರ ಸಭೆ, ಪುರಸಭೆಗಳ ಕೆಲವು ಸ್ಥಾವರಗಳು ನಗರ ಹಾಗೂ ಪಟ್ಟಣ ಪ್ರದೇಶಗಳ ಸಾರ್ವಜನಿಕರಿಗೆ ನಿತ್ಯೋಪಯುಕ್ತವಾದ ನೀರನ್ನು ಸರಬರಾಜು ಮಾಡುವ ಸಂಸ್ಥೆಗಳಿಗೆ ಸಂಬಂಧಿಸಿದ್ದು, ಇನ್ನು ಕೆಲವು ಸಂಸ್ಥೆ ಹಾಗೂ ಕೈಗಾರಿಕೆಗಳು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದ್ದು ಸಾರ್ವಜನಿಕರ ಹಾಗೂ ಸಂಬಂಧಪಟ್ಟ ಕೈಗಾರಿಕೆಗಳ ಸೌಕರ್ಯ ಕಲ್ಯಾಣ ಹಾಗೂ ಹಿತದೃಷ್ಟಿಯನ್ನು ಗಮನದಲ್ಲಿರಿಸಿ ವಿದ್ಯುಚ್ಛಕ್ತಿ ಸಂಪರ್ಕವನ್ನು ತೆಗೆದು ಹಾಕಲು ಸಾಧ್ಯವಾಗುವುದಿಲ್ಲ. ಕೆಲವು ಖಾಸಗಿ ಕೈಗಾರಿಕೆಗಳು ಮಂಡಳಿಗೆ ನೀಡಬೇಕಾಗಿರುವ ಬಾಕಿ ಹಣದ ಬಗ್ಗೆ ತಮ್ಮ ತೀವ್ರವಾದ ವಿರೋಧವನ್ನು ವ್ಯಕ್ತಪಡಿಸಿ ಮಂಡಳಿಯ ವಿರುದ್ಧ ನ್ಯಾಯಾಲಯಗಳಲ್ಲಿ ದಾವೆ ಹೂಡಿರುತ್ತವೆ. ಈ ತರಹದ ಪ್ರಕರಣಗಳು ನ್ಯಾಯಾಲಯದಲ್ಲಿ ತೀರ್ಮಾನವಾಗಬೇಕಾಗಿದೆ. ಕೆಲವು ಕೈಗಾರಿಕೆಗಳು ಕಂತಿನಲ್ಲಿ ಬಾಕಿ ಹಣವನ್ನು ಪಾವತಿ ಮಾಡಲು ಮಾಡಿದ ಮಾಡಲು ಮಾಡಿದ ಮನವಿಯನ್ನು ಪರಿಗಣಿಸಿ ಕಂತುಗಳಲ್ಲಿ ಬಾಕಿಯನ್ನು ತೀರಿಸಲು ಅವಕಾಶವನ್ನು ನೀಡಲಾಗಿದೆ. ಕೆಲವು ಕೈಗಾರಿಕೆಗಳು ರೋಗಗ್ರಸ್ತವಾಗಿವೆ ಮತ್ತು ಸರ್ಕಾರದ ಆದೇಶದಂತೆ ಅವುಗಳ ಪುನಶ್ಚೇತನಕ್ಕಾಗಿ ವಿದ್ಯುತ್ ಸರಬರಾಜನ್ನು ಮುಂದುವರಿಸಲಾಗಿದೆ.

೫) ಬಾಕಿ ಹಣವನ್ನು ವಸೂಲಿ ಮಾಡಲು ಕರ್ನಾಟಕ ವಿದ್ಯುತ್ ಮಂಡಳಿಯು (ಬಾಕಿ ಹಣದ ವಸೂಲಾತಿ) ಕಾಯಿದೆ ಮತ್ತು ವಸೂಲಾತಿ ನಿಯಮಗಳು 1976 ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ (ರಿಕವರಿ ಆಫ್ ಡ್ಯೂಸ್) ನಿಯಮಗಳು 1978 ಮತ್ತು ಸರಬರಾಜು ನಿಯಮಾವಳಿ ಪ್ರಕಾರ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದ ಪ್ರಶ್ನೆ. ಇವತ್ತು ಒಂದು ಲಕ್ಷಕ್ಕಿಂತ ಹೆಚ್ಚು ವಿದ್ಯುತ್ ಬಳಕೆದಾರರು ಇರುತ್ತಾರೆ. ಹೆಚ್ಚು ಪಾವತಿ ಮಾಡಬೇಕಾದ ಬಿಲ್ಲನ್ನು ಯಾರು ಯಾರು ಪೆಂಡಿಂಗ್ ಇಟ್ಟಿದ್ದಾರೆ ? ಏತಕ್ಕೆ ಇಟ್ಟಿದ್ದಾರೆನ್ನುವ ಮಾತನ್ನು ನಾನು ಕೇಳಿದಾಗ ಈಗ ತಾನೇ ನನಗೆ ಉತ್ತರಗಳನ್ನು ತಂದುಕೊಡುತ್ತಿದ್ದಾರೆ. ಆದಾಗ್ಯೂ ಇಲ್ಲಿ ನನಗೆ ಗೊತ್ತಿರುವ ಹಾಗೆ ಉತ್ತರದಲ್ಲಿ ಏನು ಹೇಳುತ್ತಿದ್ದಾರೆಂದರೆ ಪುರಸಭೆ, ನಗರಸಭೆ ಮತ್ತು ನಗರಪಾಲಿಕೆ ಪ್ರದೇಶಗಳಲ್ಲಿ ಅವರು ಬಿಲ್ಲನ್ನು ಕಟ್ಟಿಲ್ಲ. ಮತ್ತೆ ಕೆಲವು ಇಂಡಸ್ಟ್ರೀಸ್ ಕೂಡ ಬಿಲ್‌ಗಳನ್ನು ಕಟ್ಟಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಆದರೆ ಇದು ನ್ಯಾಯಾಲಯದಲ್ಲಿ ಇರುವುದರಿಂದ ನಾವು ಕಟ್ಟಲಿಕ್ಕೆ ಆಗಲಿಲ್ಲವೆಂದು ಅವರು ಹೇಳುತ್ತಿದ್ದಾರೆ. ಬಹುಶಃ ನನಗೆ ಗೊತ್ತಿರುವ ಮಟ್ಟಿಗೆ ಪುರಸಭೆಯವರು, ನಗರಸಭೆಯವರು ಕೋರ್ಟಿಗೆ ಹೋಗಿಲ್ಲ. ಸರ್ಕಾರ ಅವರಿಗೆ ಕೊಡಬೇಕಾದಂಥ ವಾರ್ಷಿಕ ಅನುದಾನವನ್ನು ಸರಿಯಾಗಿ ಕೊಟ್ಟಿದ್ದರೆ ಬಹುಶಃ ನಮಗೆ ವಾಪಸ್ ಕೊಡುತ್ತಿದ್ದರೋ ಏನೋ ಏತಕ್ಕೆಂದರೆ ಬಹಳಷ್ಟು ನಗರಸಭೆಗಳಿಗೆ ಸಣ್ಣ ಸಣ್ಣ ಕೆಲವು ಮಂಡಲ್ ಪಂಚಾಯತ್‌ಗಳು ಕೂಡ ಕಟ್ಟಿಲ್ಲ. ಕಾರಣ, ಅವರ ಹತ್ತಿರ ಸರ್ಕಾರ ಕೊಡಬೇಕಾದ ಅನುದಾನವನ್ನು ಪೂರೈಸದೆ ಇರುವುದು ಒಂದು. ಎರಡನೆಯದಾಗಿ ಖಾಸಗಿ ಜನರು ನ್ಯಾಯಾಲಯದಿಂದ ಆದೇಶ ತಂದಿದ್ದಾರೆಂದು ಹಲವಾರು ಬಾರಿ ಈ ಸದನದಲ್ಲಿ ಪ್ರಸ್ತಾಪವಾಗಿದೆ. ಅದರ ಬಗ್ಗೆ ಕೋರ್ಟ್‌ನಿಂದ ಏನು ಸ್ಟೇ ತಂದಿದ್ದಾರೆಂಬುದು ಈ ಸದನಕ್ಕೆ ಗೊತ್ತಾಗಬೇಕು. ಬಾಕಿ ತುಂಬಬೇಡಿ ಎಂದು ಕೋರ್ಟ್ ಏನಾದರೂ

ಸ್ಟೇ ಕೊಟ್ಟಿದೆಯೇ ಹೇಗೆ? ಅಥವಾ ಬಾಕಿ ಇದ್ದಾಗಲೂ ಕೂಡ ವಿದ್ಯುತ್ತನ್ನು ಮುಂದುವರಿಸಿ, ಹಣವನ್ನು ತೆಗೆದುಕೊಳ್ಳುವುದು ಬೇಡವೆಂದು ತಿಳಿಸಿದ್ದಾರೆಯೇ ಹೇಗೆ? ಅದರ ಬಗ್ಗೆ ಮಾನ್ಯ ಮಂತ್ರಿಗಳು ಕೋರ್ಟ್ ಏನೇನು ಹೇಳಿದೆ ಎಂಬುದನ್ನು ದಯವಿಟ್ಟು ಈ ಸದನಕ್ಕೆ ಹೇಳಬೇಕೆಂದು ಕೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ನನಗೆ ಗೊತ್ತಿರುವ ಹಾಗೆ ಉದಾಹರಣೆಗೆ ರಾಯಚೂರು ಡಿವಿಷನ್‌ನಲ್ಲಿ ಕೆಲವು ಪ್ರೈವೇಟ್‌ನವರದು ಗಂಗಾಧರೇಶ್ವರ ಆಯಿಲ್‌ಮಿಲ್, ಜೆ.ಎಸ್.ಎಸ್. ಸಂಪತ್ತು, ವಿಷ್ಣು ರೈಸ್‌ಮಿಲ್ ಅಂಥ ಸಂಸ್ಥೆಗಳಿಂದ ಎರಡು ಲಕ್ಷ, ಮೂರು ಲಕ್ಷ ಬಾಕಿ ಇದೆ. ಅದೇ ರೀತಿಯಲ್ಲಿ ಮುನಿಪಾಲ್ ಸಿಡಿಕೇಟ್ ಬ್ಯಾಂಕ್‌ನದು ಇದೆ. ಇವತ್ತಿನ ಉತ್ತರದಲ್ಲಿ ಹೊಸಪೇಟೆ ಡಿವಿಜನ್ನಿನ ಮಯೂರದ್ದು ತುಂಬಿದ್ದಾರೋ ಇಲ್ಲವೋ ಗೊತ್ತಿಲ್ಲ. ಹೊಸಪೇಟೆ ಕೆ.ಇ.ಬಿ. ಡಿವಿಷನ್‌ನವರದು ಒಂದು ರೂಪಾಯಿ ಬಾಕಿ ಇಲ್ಲವೆಂದು ಉತ್ತರದಲ್ಲಿ ತೋರಿಸಿದ್ದಾರೆ. ಅದಕ್ಕೆ ಮೊನ್ನೆ ಮಾನ್ಯ ಯಡಿಯೂರಪ್ಪನವರಿಗೆ ಉತ್ತರ ಕೊಟ್ಟಿದ್ದರಲ್ಲಿ ಹೊಸಪೇಟೆ ಡಿವಿಜನ್‌ನಲ್ಲಿ ಮಯೂರದವರದು ಏರಡು ಕೋಟಿ ಚಿಲ್ಲರೆ ಬಾಕಿ ಇದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಉತ್ತರದಲ್ಲಿ ಹೊಸಪೇಟೆಯವರ ವಿಚಾರವೇ ಇಲ್ಲ. ಉತ್ತರದಲ್ಲಿ ಏತಕ್ಕೆ ಈ ರೀತಿ ವ್ಯತ್ಯಾಸ ಬರುತ್ತಿದೆ? ದಯವಿಟ್ಟು ಸವಿಸ್ತಾರವಾಗಿ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಒಂದು ಲಕ್ಷ ರೂಪಾಯಿಗಳಿಗೂ ಹೆಚ್ಚು ವಿದ್ಯುತ್ ಬಾಕಿ ಪಾವತಿ ಮಾಡದೆ ಇರತಕ್ಕಂಥ ಕೈಗಾರಿಕೆಗಳು ಏನಿದೆ ಅವರ ಹೆಸರುಗಳೇನು ಎಂದು ಕೇಳಿದ್ದೀರಿ. ಆ ಹೆಸರುಗಳು ಇಲ್ಲಿವೆ. ತಮಗೆ ಅದರ ಟಿಪ್ಪಣಿ ಕಳುಹಿಸಿಕೊಟ್ಟಿದ್ದೇವೆ. ವಸೂಲಿ ಮಾಡದಿರುವುದಕ್ಕೆ ಕಾರಣಗಳು ಏನು? ಮತ್ತು ಅವುಗಳನ್ನು ವಸೂಲು ಮಾಡುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರೆಂದು ಕೇಳಿದ್ದೀರಿ. ಮೊದಲು ಅವರಿಗೆ ನೋಟೀಸ್ ಕೊಡುತ್ತೇವೆ. ಅನಂತರ ಅವರು ವಿದ್ಯುತ್ ಬಿಲ್ಲನ್ನು ಕಟ್ಟದೆ ಹೋದರೆ ಅವರಿಗೆ ವಿದ್ಯುಚ್ಛಕ್ತಿಯನ್ನು ಕಟ್ ಮಾಡುತ್ತೇವೆ. ಅನಂತರ ಅವರಿಗೆ ಬಡ್ಡಿ, ಬಡ್ಡಿ ಮೇಲೆ ಸುಸ್ತಿ ಬಡ್ಡಿ ಇವುಗಳನ್ನೆಲ್ಲ ಹಾಕುತ್ತೇವೆಂದು ಹೇಳುತ್ತೇವೆ. ಇಷ್ಟೆಲ್ಲ ಮಾಡಿದಾಗಲೂ ಕೂಡ ಕೆಲವು ಮಂಡಲ್ ಪಂಚಾಯತ್‌ಗಳು ಮತ್ತು ಮುನಿಸಿಪಾಲಿಟಿಗಳು ಹಣವನ್ನು ಕೊಡದೇ ಹೋದಾಗ ನಾವು ಕುಡಿಯುವ ನೀರಿನ ವಿತರಣೆಗೆ ಅನಾನುಕೂಲವಾಗದಿರಲಿ ಎಂದು ಅದರ ಬಗ್ಗೆ ಬಹಳ ಮಟ್ಟಿಗೆ ಲಿಬರಲ್ ಆಗಿ ವಿದ್ಯುತ್ ಯೋತ ಮಾಡತಕ್ಕಂಥದ್ದನ್ನು ಮಾಡುತ್ತಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಡಿವಿಷನ್‌ದು ಕೊಟ್ಟಿದ್ದಾರಲ್ಲ ಅವರಿಂದ 4 ಕೋಟಿ ರೂಪಾಯಿಗಳು ಬಾಕಿ ಇದೆ. ಆದ್ದರಿಂದ ಇದನ್ನು ನೋಡಿದಾಗ ಹೆಚ್ಚು ಇರುವುದು ಬಳ್ಳಾರಿ ಡಿವಿಜನ್‌ದು. ಬಳ್ಳಾರಿ ಸ್ಟೀಲ್ ಅಂಡ್ ಅಲ್ಲೈ, ಮೆಸರ್ಸ್ ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್, ಕರ್ನಾಟಕ ಸ್ಟೀಲ್ ಅಂಡ್ ರೋಲಿಂಗ್ ಮಿಲ್ ಇವೆಲ್ಲ ಇದೆಯಲ್ಲ ಇವು ಬಹುತೇಕ ಎಂ.ಪಿ. ಮತ್ತು ಎಂ.ಎಲ್.ಎ.ಗಳಿಗೆ ಸಂಬಂಧಪಟ್ಟಂಥವಾಗಿರುತ್ತದೆ. ಅನಂತರ ಮಯೂರದವರದು 4 ಕೋಟಿ ಇದೆ. ಸಿದ್ದೇಶ್ವರ ಇಂಡಸ್ಟ್ರೀಸ್‌ದು ಬಾಕಿ ಇದೆ. ದಯವಿಟ್ಟು ಇದನ್ನು ಯಾವಾಗ ವಸೂಲು ಮಾಡುತ್ತೀರಿ ಎಂಬುದನ್ನು ತಿಳಿಸಬೇಕು. ಕೋರ್ಟ್ ಸ್ಟೇ ತಂದಿದ್ದರೆ ಅದನ್ನು ದಯವಿಟ್ಟು ಸವಿಸ್ತಾರವಾಗಿ ಹೇಳಬೇಕು. ಹಾಗಿಲ್ಲದಿದ್ದರೆ ದಯವಿಟ್ಟು ಅವರಿಗೆ ವಿದ್ಯುತ್ತನ್ನು ನಿಲ್ಲಿಸಿಬಿಡುತ್ತೇವೆಂದು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ:– ವಿದ್ಯುಚ್ಛಕ್ತಿ ಮಂಡಲಿಯವರು ನಿಷ್ಕರುಣೆಯಿಂದ ಈ ದೊಡ್ಡ ದೊಡ್ಡ ಕೈಗಾರಿಕೆಗಳಿಂದ ಬರಬೇಕಾಗಿರತಕ್ಕಂಥ ಬಾಕಿಯನ್ನು ವಸೂಲು ಮಾಡುವುದಕ್ಕೆ ಪ್ರಯತ್ನ

ಮಾಡಿದಾಗಲೆಲ್ಲವೂ ಕೂಡ ದೊಡ್ಡ ಕೈಗಾರಿಕೆಗಳು ಹತ್ತಿರದಲ್ಲಿರತಕ್ಕ ಯಾವುದಾದರೂ ಕೋರ್ಟಿಗೆ ಹೋಗಿ ಆ ಕೋರ್ಟಿನಿಂದ ತಡೆಯಾಜ್ಞೆ ಪಡೆದಿರುತ್ತಾರೆ. ಆ ತಡೆಯಾಜ್ಞೆ ಪ್ರಕಾರ ನಾವು ವಿದ್ಯುತ್ತನ್ನು ಅವರಿಗೆ ಮುಂದುವರಿಸಿಕೊಂಡು ಹೋಗಬೇಕೆಂಬುದು ಒಂದು ನಮೂದಾಗಿರುತ್ತದೆ. ಜೊತೆಗೆ ಬಹುಮಟ್ಟಿಗೆ ಅವರಲ್ಲೂ ನಮ್ಮಲ್ಲೂ ಕಾನ್‌ಫ್ಲಿಕ್ಟಿಂಗ್ ಕ್ಲೈಮ್ಸ್ ಇರುತ್ತವೆ. ವಿಶೇಷವಾಗಿ ನಾವು ಏನು ಬಡ್ಡಿ ದರ ನಿಯಮಿಸಿ ಕೊಟ್ಟಿರುತ್ತೇವೆ ಮತ್ತು ಬಡ್ಡಿ ಮೇಲೆ ಏನು ಬಡ್ಡಿ ಹಾಕುತ್ತಿದ್ದೇವೆ ಅದರ ಬಗ್ಗೆ ಜಿಜ್ಞಾಸೆಗಳು ಜಾಸ್ತಿ. ಆದುದರಿಂದ ಕೋರ್ಟಿನಲ್ಲಿ ಅವುಗಳೆಲ್ಲ ಹೋಗಿ ಅಲ್ಲೇ ನಿಂತುಹೋಗಿವೆ. ಮಾನ್ಯ ಸದಸ್ಯರಿಗೆ ಜ್ಞಾಪಕ ಇರಬೇಕು, ನಾನು ಕಳೆದ ಸಾರಿ ಇದೇ ಸದನದಲ್ಲಿ ಉತ್ತರ ಕೊಡತಕ್ಕ ಕಾಲದಲ್ಲಿ ಈಗಾಗಲೇ ನಾವು ಕರ್ನಾಟಕ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಕೇಳಿಕೊಂಡಿದ್ದೇವೆ. ಸರ್ಕಾರಕ್ಕೆ ಬರಬೇಕಾಗಿರತಕ್ಕಂಥ ಹಣ, ಕೇವಲ ವಿದ್ಯುಚ್ಛಕ್ತಿ ಮಂಡಲಿಗೆ ಮಾತ್ರವಲ್ಲ ಸರ್ಕಾರದ ಯಾವುದೇ ಇಲಾಖೆಗಳಿಗೆ ಬರತಕ್ಕ ಬಾಕಿ ಬಗ್ಗೆ ಏನೇನು ಕಡತಗಳಿವೆ, ಕಟ್ಟಳೆಗಳಿವೆ ಅವೆಲ್ಲವನ್ನು ವಿಶೇಷ ಬೆಂಚಿನ್ನು ನಿರ್ಮಾಣ ಮಾಡಿ ಆದಷ್ಟು ಜಾಗ್ರತೆ ಆ ಕಟ್ಟಳೆಗಳನ್ನು ವಿಲೇವಾರಿ ಮಾಡುವುದರ ಮೂಲಕ ಸರ್ಕಾರಕ್ಕೆ ಮತ್ತು ಎಲ್ಲರಿಗೂ ಸಹಾಯ ಮಾಡಿ ಎಂದು ಕೇಳಿದ್ದೇವೆ. ಅದನ್ನು ಅವರು ಪರಿಶೀಲಿಸುತ್ತಾರೆಂದು ನಾವು ಆಸೆ ಇಟ್ಟುಕೊಂಡಿದ್ದೇವೆ.

## ಗಂಡಸಿ ಕ್ಷೇತ್ರದಲ್ಲಿ ವಿದ್ಯುದ್ದೀಕರಣವಾಗದೆ ಬಾಕಿ ಇರುವ ಕುಡಿಯುವ ನೀರಿನ ಯೋಜನೆಗಳು

**365 (2020):** ಶ್ರೀ ಬಿ. ಶಿವರಾಮು (ಗಂಡಸಿ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಂಡಸಿ ಕ್ಷೇತ್ರದ ಅರಸೀಕೆರೆ ತಾಲ್ಲೂಕು ಮತ್ತು ಹಾಸನ ತಾಲ್ಲೂಕಿನ ನಾಲ್ಕು ಹೋಬಳಿಗಳಿಂದ (ಜಾವಗಲ್, ಗಂಡಸಿ, ದುದ್ದ ಮತ್ತು ಸಾಲಗಾಮೆ) ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುದ್ದೀಕರಣವಾಗದೆ ಬಾಕಿ ಇರುವ ಒಟ್ಟು ಯೋಜನೆಗಳೆಷ್ಟು (ಪಟ್ಟಿಯನ್ನು ಮತ್ತು ನೋಂದಣಿಯ ದಿನಾಂಕವನ್ನು ಒದಗಿಸುವುದು);

ಆ) ವಿಳಂಬಕ್ಕೆ ಕಾರಣವೇನು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ಫೆಬ್ರವರಿ 1993ರ ಅಂತ್ಯದಲ್ಲಿರುವಂತೆ ವಿದ್ಯುದ್ದೀಕರಣಕ್ಕಾಗಿ ಬಾಕಿ ಉಳಿದಿರುವ ಯೋಜನೆಗಳ ಒಟ್ಟು ಸಂಖ್ಯೆ 19. ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಇವುಗಳಲ್ಲಿ ನಾಲ್ಕು ಯೋಜನೆಗಳಿಗೆ ಅರ್ಜಿಗಳು ಕೇವಲ ಜನವರಿ ಮತ್ತು ಫೆಬ್ರವರಿ 1993ರ ತಿಂಗಳಲ್ಲಿ ನೋಂದಾಯಿತವಾಗಿದ್ದು, ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಏಂಟು ಯೋಜನೆಗಳ ವಿದ್ಯುದ್ದೀಕರಣದ ಕೆಲಸಗಳು ಪ್ರಗತಿಯಲ್ಲಿವೆ, ಅದಷ್ಟು ಶೀಘ್ರಗತಿಯಲ್ಲಿ ಪೂರ್ಣಗೊಳಿಸಲಾಗುವುದು. ಐದು ಯೋಜನೆಗಳ ವಿದ್ಯುದ್ದೀಕರಣದ ಕೆಲಸಗಳನ್ನು ನಿರ್ವಹಿಸಲು ಸಂಬಂಧಿಸಿದ ಜಿಲ್ಲಾಪರಿಷತ್: ಮಂಡಲ ಪಂಚಾಯ್ತಿಯವರು ಮುಂಡಳಿಯ ನಿಯಮಗಳನ್ನು ಇದುವರೆಗೆ ಪಾಲಿಸಿಲ್ಲ.

ಒಂದು ಯೋಜನೆಗೆ ಜಿಲ್ಲಾ ಪರಿಷತ್‌ಗೆ ರೈಲ್ವೆ ಇಲಾಖೆಯಿಂದ ಪೈಪುಗಳನ್ನು ಹಾಕಲು ಒಪ್ಪಿಗೆ ದೊರೆಯಬೇಕಾಗಿದ್ದು, ಒಪ್ಪಿಗೆ ದೊರೆತ ನಂತರ, ವಿದ್ಯುದ್ದೀಕರಣದ ಕೆಲಸವನ್ನು ನಿರ್ವಹಿಸಲಾಗುವುದು.